## ಅಧ್ಯಾಯ 6 ಅಭ್ಯಾಸದ ಹಾಳೆ

# ಕ್ರಿಸ್ತನ ಸಭೆಯ ಸಂಘಟನೆ ಯಾವುದಾಗಿತ್ತು?

I. ಕ್ರಿಸ್ತನ ಸಭೆಯಲ್ಲಿ ಯಾವ ಹುದ್ದೆಗಳು ಇದ್ದವು?

1. ಯೇಸುವು ಸಭೆಯ __________ ಆಗಿದ್ದಾನೆ. ಎಫೆಸ 5:25
2. ಅಸ್ತಿವಾರದಲ್ಲಿ __________ ಮತ್ತು __________ ಇದ್ದಾರೆ. ಎಫೆಸ 2:20
3. ಆತನು ಕೆಲವರನ್ನು __________ , __________ , __________ , __________ ಮತ್ತು __________ ಕೊಟ್ಟನು. ಎಫೆಸ 4:11

II. ಈ ಹುದ್ದೆಗಳ ಉದ್ದೇಶವು __________ , __________ , __________ ಆಗಿತ್ತು. ಎಫೆಸ 4:12, 13

III. ಈ ಹುದ್ದೆಗಳ ಜವಾಬ್ದಾರಿಕೆಗಳು ಯಾವವಾಗಿದ್ದವು?

1. ಯೇಸುವು __________ ಆಗಿರುತ್ತಾನೆ. ಯಾಕೋಬ 4:12; ಅಪೊಸ್ತಲರ ಕೃತ್ಯಗಳು 3:23, 24
2. ಅಪೊಸ್ತಲರು ಯೇಸುವಿನ ಬೋಧನೆಯನ್ನು __________ ಜನರಿಗಾಗಿ ಬೋಧಿಸತಕ್ಕದ್ದು. ಮತ್ತಾಯ 28:20
3. __________ ಮತ್ತು __________ ಬೋಧನೆಯು ಪ್ರಕಟಿಸಲ್ಪಟ್ಟಿತು. ಎಫೆಸ 3:3-5
4. ಸಭೆಯು ಬೋಧನೆಯನ್ನು __________ ನಿರತವಾಗಿತ್ತು. ಅಪೊಸ್ತಲರ ಕೃತ್ಯಗಳು 2:42
5. ಹಿರಿಯರು ದೇವರ ಮಂದೆಯನ್ನು __________ (ಗ್ರೀಕ: <u>poimaino</u>, ಪಾಸ್ಟರ್, ಕುರುಬ) ಅದರ __________ . 1 ಪೇತ್ರ 5:1, 2
6. ಪೌಲನು __________ ಕರೆದನು (ಅಪೊಸ್ತಲರ ಕೃತ್ಯಗಳು 20:17) ಅವರು __________ ರಾಗಿ (<u>poimaino</u>) ಅಪೊಸ್ತಲರ ಕೃತ್ಯಗಳು 20:28 ಇಡಲ್ಪಟ್ಟ ಸಭೆಯ ಮೇಲೆ __________ (<u>episkopos</u>, bishops) ಆಗಿರಬೇಕೆಂದು ಹೇಳಿದನು
7. ಸುವಾರ್ತಿಕರು ವಾಕ್ಯವನ್ನು __________ . 2 ತಿಮೊಥೆ 4:2, 5
8. ಬೋಧಕರು ಇತರರಿಗೆ __________ . 2 ತಿಮೊಥೆ 2:2
9. ಸಭೆಗೆ __________ ಇದ್ದರು (<u>diakonos</u>, ಸೇವೆ ಮಾಡುವವರು). 1 ತಿಮೊಥೆ 3:8
10. ಮಹಿಳೆಯರು ಸಭಾ ಕೂಟಗಳಲ್ಲಿ __________ ಇರಬೇಕು. 1 ಕೊರಿಂಥ 14:34, 35; 1 ತಿಮೊಥೆ 2:10-12
11. ಸದಸ್ಯರು ತಮ್ಮ ಮೇಲಿರುವವರಿಗೆ __________ . ಇಬ್ರಿಯ 13:17

IV. ಎಷ್ಟು ಜನ ಅಧ್ಯಕ್ಷರು (ಹಿರಿಯರು, ಬಿಷಪರು, ಸಭಾಪಾಲಕರು)


ಪ್ರತಿಯೊಂದು ಸಭೆಯಲ್ಲಿ ಇದ್ದರು?

1. ಪ್ರತಿಯೊಂದು ಸಭೆಯಲ್ಲಿ ______________ ನೇಮಿಸಲ್ಪಟ್ಟರು. ಅಪೊಸ್ತಲರ ಕೃತ್ಯಗಳು 14:23; ತೀತ 1:5
2. ಸಭೆಗಳಲ್ಲಿ ______________ ಇದ್ದರು. ಅಪೊಸ್ತಲರ ಕೃತ್ಯಗಳು 15:2; 20:17; ಫಿಲಿಪ್ಪಿ 1:1

V. ಈ ಹುದ್ದೆಗಳಲ್ಲಿ ಸೇವೆ ಮಾಡಲು ಮೊದಲು ಕೆಲವೊಂದು ಅರ್ಹತೆಗಳನ್ನು ಒಬ್ಬನು ಹೊಂದಿಕೊಂಡಿರಬೇಕಾಗಿತ್ತೋ?

1. ಅಪೊಸ್ತಲರು ______________ ಅಪೊಸ್ತಲರ ಕೃತ್ಯಗಳು 1:21, 22
2. ಹಿರಿಯರು ______________ 1 ತಿಮೊಥೆ 3:1-7; ತೀತ 1:5-9
3. ಡೀಕನರು ______________ 1 ತಿಮೊಥೆ 3:8-13
4. ಸುವಾರ್ತಿಕರು ______________ 2 ತಿಮೊಥೆ 2:24, 25
5. ಬೋಧಕರು ______________ 1 ಪೇತ್ರ 4:11

Copyright 1973 - Gospel Light Pub. Co., Delight, AR 71940



**ಅಧ್ಯಯನ ಪ್ರಶ್ನಾವಳಿಯನ್ನು ಪ್ರಸ್ತುತ ಪಡಿಸುವುದು:**

**6**

# "ಕ್ರಿಸ್ತನ ಸಭೆಯ ಸಂಘಟನೆ ಯಾವುದಾಗಿತ್ತು?"

"ಕ್ರಿಸ್ತನ ಸಭೆಯ ಸಂಘಟನೆ ಯಾವುದಾಗಿತ್ತು?" ಎಂಬ ಈ ಅಧ್ಯಯನವು ತಾರ್ಕಿಕವಾಗಿ "ಸಭೆ" (ಪಾಠ) ಅಧ್ಯಯನ ಪ್ರಶ್ನಾವಳಿಯ ನಂತರ ಬರಬೇಕು. ವಿದ್ಯಾರ್ಥಿಯು ಸುವಾರ್ತೆಗೆ ವಿಧೇಯನಾಗಲು ಸಿದ್ಧನಾಗಿದ್ದರೆ, "ಸಂಘಟನೆಯ" (ಪಾಠ 8) ಅಧ್ಯಯನ ಪ್ರಶ್ನಾವಳಿಗಿಂತ ಮೊದಲು "ಅಂತಿಮಸ್ಥಿತಿ" ಅಧ್ಯಯನ ಪ್ರಶ್ನಾವಳಿಯನ್ನು ಅಧ್ಯಯನ ಮಾಡಲು ತೀರ್ಮಾನಿಸ ಬಹುದು.

**ಉದ್ದೇಶ**

ಯೇಸುವಿನ ಅನುಯಾಯಿಗಳು ಹೇಗೆ ಸಂಘಟಿಸಲ್ಪಡಬೇಕೆಂಬುದನ್ನು ಅರ್ಥಮಾಡಿಕೊಳ್ಳಲು, ಯೇಸುವಿನಿಂದ ಮತ್ತು ಅಪೊಸ್ತಲರಿಂದ ಸಂಘಟಿಸಲ್ಪಟ್ಟದ್ದರಂತೆ "ಸಭೆಯ ಸಂಘಟನೆಯನ್ನು" ಅಧ್ಯಯನ ಮಾಡುವದು ಇದರ ಉದ್ದೇಶವಾಗಿದೆ.

**ಸಂಕ್ಷಿಪ್ತದಲ್ಲಿ ಪಾಠ**

ಈ ಅಧ್ಯಯನವು, ಯೇಸುವು, ಸಭೆಯ ಶಿರಸ್ಸು, ಮಾತ್ರವೇ ಸಭೆಗಾಗಿ ಕಾನೂನು ಮಾಡುವವನಾಗಿರುತ್ತಾನೆಂದು ತೋರಿಸುತ್ತದೆ. ಅಪೊಸ್ತಲರು ಯೇಸುವಿನ ವಿಶೇಷ ಪ್ರತಿನಿಧಿಗಳಂತೆ, ಯೇಸುವಿನ ನಿಯಮಗಳನ್ನು ಇತರರಿಗೆ ತಿಳಿಸುವವರಾಗಿರ ಬೇಕಾಗಿತ್ತು. ಇದರಿಂದ ಅವರು ಯೇಸುವಿನ ವಾಕ್ಯವನ್ನು ತಿಳಿಯಬೇಕಾಗಿತ್ತು. ವಾಕ್ಯ ವನ್ನು ಅನುಸರಿಸುವಂತೆ ಸಭೆಯನ್ನು ಹಿರಿಯರು ನಡಿಸಬೇಕಾಗಿತ್ತು. ಡೀಕನರು ಮತ್ತು ಸುವಾರ್ತಿಕರು ಹಿರಿಯರಿಗೆ ಸಹಾಯಕರಾಗಿದ್ದರು ಮತ್ತು ಸಭೆಯು ಯೇಸುವಿನ ಚಿತ್ತವನ್ನು ಕೈಕೊಳ್ಳುವದರಲ್ಲಿ ನಾಯಕರನ್ನು ಅನುಸರಿಸಬೇಕಾಗಿತ್ತು.

**ಪೀಠಿಕೆ**

[ಪರಿಣಾಮಕಾರಿಯಾದದ್ದೂ ಸಮರ್ಥವಾದದ್ದೂ ಆಗಿರುವದಕ್ಕಾಗಿ ಸಂಘಟನೆಯು ಮಹತ್ವದ್ದಾಗಿರುವದೆಂಬ ಸಂಗತಿಯ ಬಗ್ಗೆ ಈ ಪಾಠವು ಸಂಕ್ಷೇಪ ವಾಗಿ ಪರಿಚಯಿಸಲ್ಪಡಬಹುದು. ಯೇಸುವು ತನ್ನ ಸಭೆಯ ಸಂಘಟನೆಗಾಗಿ ವ್ಯವಸ್ಥೆ ಮಾಡಿದನು. ಯೇಸುವಿನ ಅನುಯಾಯಿಗಳಾಗಿ ನಾವು ಸಂಘಟನೆಯ ಆತನ ಯೋಜ ನೆಗಳನ್ನು ನಾವು ಅನುಸರಿಸಲು ಹುಡಕಬೇಕು.]

ಇಂದು ಸಭೆಗಳು ಅನೇಕ ಭಿನ್ನವಾದ ರೀತಿಗಳಲ್ಲಿ ಸಂಘಟಿಸಲ್ಪಟ್ಟಿವೆ,

ಸಾಮಾನ್ಯವಾಗಿ ಈ ಸಭೆಗಳಿಗೆ ಒಂದು ಬಲವಾದ ಕೇಂದ್ರ ಆಡಳಿತೆಯಿರುತ್ತದೆ. ಅದು ವಿಶ್ವಾಸ ಸೂತ್ರದ ಹೇಳಿಕೆಗಳನ್ನು ಬರೆಯುತ್ತದೆ ಮತ್ತು ಕೆಲವು ವಿಷಯಗಳಲ್ಲಿ ಸ್ಥಳಿಕ ಸಭೆಗಳಿಗೆ ಅಪ್ಪಣೆ ಕೊಡುತ್ತದೆ ಮತ್ತು ಅವುಗಳ ಕೆಲವು ಆಂತರಿಕ ವ್ಯವಹಾರಗಳನ್ನು ನಿಯಂತ್ರಿಸುತ್ತದೆ. ಯೇಸುವು ತನ್ನ ಸಭೆಗಾಗಿ ಇದನ್ನು ಯೋಜಿಸಿದ್ದನೋ?

## I. ಹುದ್ದೆಗಳು

ಈ ಪಾಠದಲ್ಲಿ ಹುದ್ದೆಗಳ ಬಗ್ಗೆ ನಾವು ಮಾತಾಡುವಾಗ, ಜವಾಬ್ದಾರಿಕೆಗಳ ಬಗ್ಗೆ ಮಾತಾಡುವಷ್ಟನ್ನು ಅಧಿಕಾರದ ಬಗ್ಗೆ ನಾವು ಮಾತಾಡುತ್ತಿರುವದಿಲ್ಲ. ಕೆಲವು ವಿಷಯಗಳಲ್ಲಿ ಅಧಿಕಾರವು ಹುದ್ದೆಯಲ್ಲಿ ಒಳಗೊಂಡಿರುತ್ತದೆ, ಆದರೆ ಎಲ್ಲಾ ವಿಷಯಗಳಲ್ಲಿ ಅಲ್ಲ; ಹೀಗಿದ್ದರೂ ಜವಾಬ್ದಾರಿಕೆಗಳು ಎಲ್ಲಾ ಹುದ್ದೆಗಳಲ್ಲಿ ಒಳಗೊಂಡಿರುತ್ತವೆ.

1. ನಾವು "ಸಭೆ" ಅಧ್ಯಯನ ಪ್ರಶ್ನಾವಳಿಯನ್ನು (ಪಾಠ 5) ಅಧ್ಯಯನ ಮಾಡಿದಾಗ, ಸಭೆಯು ಯೇಸುವಿನ ಅಧಿಕಾರದೊಳಗೆ ಇದೆಯೆಂದು ನಾವು ಕಲಿತುಕೊಂಡೆವು. ಯೇಸುವು ಸಭೆಗೆ ಏನಾಗಿದ್ದಾನೆ? [ಓದಿರಿ ಎಫೆಸ 5:23.] ಆತನು ಸಭೆಗೆ *ಏನಾಗಿರುತ್ತಾನೆ?* [ಖಾಲಿಯಾದ ಸ್ಥಳದಲ್ಲಿ "ಶಿರಸ್ಸು" ಎಂದು ತುಂಬಿರಿ.]

2. ಒಂದು ಕಟ್ಟಡವು ಕಟ್ಟಲ್ಪಡುವ ಮೊದಲು, ಅಸ್ತಿವಾರವು ಹಾಕಲ್ಪಡುತ್ತದೆ. ಆಸ್ತಿವಾರವು ಕಟ್ಟಡದ ಕೆಳಗೆ ಉಳಿಯುತ್ತದೆ, ಮತ್ತು ಕಟ್ಟಡದ *ಉಳಿದ* ಭಾಗವು ಅಸ್ತಿವಾರದ ಮೇಲೆ ಇಡಲ್ಪಡುತ್ತದೆ. ಸಭೆಯ ಅಸ್ತಿವಾರದಲ್ಲಿ ಯಾರು ಇರುತ್ತಾರೆ? [ಓದಿರಿ ಎಫೆಸ 2:20.] ಈ ರೂಪಕದಲ್ಲಿ ಯೇಸುವು ಅಸ್ತಿವಾರದ ಮೂಲೆಗಲ್ಲಾಗಿ ಚಿತ್ರಿಸಲ್ಪಟ್ಟಿದ್ದಾನೆ. ಒಮ್ಮೆ ಮೂಲೆಗಲ್ಲು ಇಡಲ್ಪಟ್ಟಾಗ, ಕಟ್ಟಡದ ಉಳಿದಭಾಗವು ಮೂಲೆಗಲ್ಲಿಗೆ ಸಂಬಂಧಿಸಿ ರಚಿಸಲ್ಪಡುವುದು. *ಯಾರು* ಅಸ್ತಿವಾರವಾಗಿರುವರು? [ಖಾಲಿಯಾದ ಸ್ಥಳದಲ್ಲಿ "ಅಪೊಸ್ತಲರು" ಮತ್ತು "ಪ್ರವಾದಿಗಳು" ಎಂದು ತುಂಬಿರಿ.] ಈ ವಾಕ್ಯಭಾಗದಲ್ಲಿ ಹೇಳಲ್ಪಟ್ಟ ಪ್ರವಾದಿಗಳು ಹಳೇ ಒಡಂಬಡಿಕೆಯ ಪ್ರವಾದಿಗಳಾಗಿರುವದಿಲ್ಲ ಆದರೆ ಹೊಸ ಒಡಂಬಡಿಕೆಯ ಪ್ರವಾದಿಗಳಾಗಿರುವರು.

ಇದು "ಸಭೆ" ಅಧ್ಯಯನ ಪ್ರಶ್ನಾವಳಿಯಲ್ಲಿ (ಪಾಠ 5) ನಾವು ಕಲಿತುಕೊಂಡದ್ದಕ್ಕೆ ವಿರುದ್ಧವಾದದ್ದಾಗಿರುವದಿಲ್ಲ. ಆ ಪಾಠದಲ್ಲಿ ನಾವು ಯೇಸುವು *ಮಾತ್ರವೇ* ಅಸ್ತಿವಾರವಾಗಿದ್ದಾನೆ ಎಂದು ಕಲಿತುಕೊಂಡೆವು (1 ಕೊರಿಂಥ 3:11). ಆ ರೂಪಕದಲ್ಲಿ ಅಪೊಸ್ತಲರು ಅಸ್ತಿವಾರ ಹಾಕುವವರು ಮತ್ತು ಅದರ ಮೇಲೆ ಅವರೇ ಕಟ್ಟಲ್ಪಡುವವರೂ ಆಗಿದ್ದಾರೆ. ಈ ರೂಪಕದಲ್ಲಿ ಯೇಸುವು, ಅಸ್ತಿವಾರದಲ್ಲಿ ಮುಖ್ಯಬಂಡೆ, ಮೂಲೆಗಲ್ಲು, ಆಗಿದ್ದಾನೆ. ಸಭೆಯಲ್ಲಿ ಪ್ರತಿಯೊಂದೂ ಯಾರ ಮೇಲೆ ಸಭೆಯು ಕಟ್ಟಲ್ಪಟ್ಟಿದೆಯೋ ಆ ಅಪೊಸ್ತಲರನ್ನು ಒಳಗೊಂಡು ಯೇಸುವಿನೊಂದಿಗೆ ಇಡಲ್ಪಟ್ಟಿದೆ. ಯಾಕಂದರೆ ಅವರು ಯೇಸುವು ಪರಲೋಕಕ್ಕೆ ಹಿಂದಿರುಗಿ ಹೋದಂದಿನಿಂದ ಆತನ ಪ್ರತಿನಿಧಿಗಳಂತೆ ಯೇಸುವಿನ ಸ್ಥಾನದಲ್ಲಿ ನಿಂತುಕೊಂಡಿದ್ದಾರೆ. ಸಭೆಯಲ್ಲಿ ಅವರ ಪಾತ್ರವನ್ನು ಅನಂತರ ಚರ್ಚಿಸುವೆವು.

3. ಎಫೆಸದಲ್ಲಿಯ ಸಭೆಗೆ ಬರೆಯುವಾಗ ಪೌಲನು ಯಾವ ಹುದ್ದೆಗಳನ್ನು ಯಾದಿ ಮಾಡುತ್ತಾನೆ? [ಓದಿರಿ ಎಫೆಸ 4:11.] ಹುದ್ದೆಗಳು *ಯಾವವು?* [ಖಾಲಿಯಾದ ಸ್ಥಳದಲ್ಲಿ "ಅಪೊಸ್ತಲರು" "ಪ್ರವಾದಿಗಳು," "ಸುವಾರ್ತಿಕರು," "ಸಭಾಪಾಲಕರು," ಮತ್ತು "ಬೋಧಕರು" ಎಂದು ತುಂಬಿರಿ.] ಮುಂದಿನ ಭಾಗದಲ್ಲಿ ಈ ಹುದ್ದೆಗಳಲ್ಲಿ ಪ್ರತಿಯೊಂದರ ಜವಾಬ್ದಾರಿಕೆಗಳನ್ನು ಅಧ್ಯಯನ ಮಾಡುವೆವು.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಸಭೆಯ ಶಿರಸ್ಸಾದ

ಯೇಸುವಿನ ಅಧಿಕಾರದ ಅಧೀನತೆಯಲ್ಲಿ ಕಾರ್ಯಮಾಡಿದ ವಿವಿಧ ಹುದ್ದೆಗಳು ಸಭೆಗೆ ಇದ್ದವು ಎಂಬುದನ್ನು ನಾವು ಕಲಿತುಕೊಂಡಿದ್ದೇವೆ.

## II. ಹುದ್ದೆಗಳ ಉದ್ದೇಶಗಳು

ಸಭೆಯಲ್ಲಿ ಹುದ್ದೆಗಳು ಅದರಲ್ಲಿ ಸೇವೆ ಮಾಡುವವರನ್ನು ಮಹಿಮೆ ಪಡಿಸುವದಕ್ಕಾಗಿ ಇಡಲ್ಪಡಲಿಲ್ಲ. ಹುದ್ದೆಯಲ್ಲಿದ್ದವರು ಏನನ್ನು ಸಾಧಿಸಬೇಕಾಗಿತ್ತು? [ಓದಿರಿ ಎಫೆಸ 4:12, 13.] ಈ ಹುದ್ದೆಗಳು *ಯಾಕೆ* ಸ್ಥಾಪಿಸಲ್ಪಟ್ಟವು? [ಖಾಲಿಯದ ಸ್ಥಳಗಳಲ್ಲಿ "ದೇವ ಜನರನ್ನು ಯೋಗ್ಯ ಸ್ಥಿತಿಗೆ ತರುವದಕ್ಕಾಗಿ," "ಸಭೆಯ ಸೇವೆಗೋಸ್ಕರ," "ದೇಹವು ಅಭಿವೃದ್ಧಿ ಯಾಗುವದಕ್ಕೋಸ್ಕರ" ಎಂದು ತುಂಬಿರಿ.] ಇವು ಸೇವೆಯ ಜವಾಬ್ದಾರಿಕೆಗಳು ಎಂಬುದನ್ನು ಗಮನಿಸಿರಿ. ಈ ಹುದ್ದೆಗಳಲ್ಲಿ ಇದ್ದವರು ಸಭೆಯ ಸದಸ್ಯರ ವೃದ್ಧಿಗೋಸ್ಕರವಾಗಿ, ತಮ್ಮ ಉದಾಹರಣೆಗಳಿಗೆ ಬೆಳೆಯುವಂತೆ ಅವರಿಗೆ ಸಹಾಯ ಮಾಡುವದಕ್ಕಾಗಿ, ಯೇಸುವಿನ ಪ್ರಮಾಣಕ್ಕೆ ಮುಟ್ಟಿಸುವದಕ್ಕಾಗಿ ಕಾರ್ಯಮಾಡಬೇಕಾಗಿರುವಂಥದ್ದಾಗಿರುವುದು.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಸಭೆಯೊಳಗೆ ವಿವಿಧ ಸ್ಥಾನಗಳಲ್ಲಿ ಸೇವೆ ಮಾಡಿದವರು ಸಭೆಯನ್ನು ಕಟ್ಟುವದಕ್ಕಾಗಿ ಮತ್ತು ಸಭೆಯ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಾಗಿತ್ತೆಂಬುದನ್ನು ಕಲಿತುಕೊಂಡೆವು.

## III. ಜವಾಬ್ದಾರಿಕೆಗಳು

ಸಭೆಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಮಾಡಿದವರಿಗೆ ಸಭೆಯ ಬೆಳವಣಿಗೆಗಾಗಿಯೂ ಸೇವೆಗಾಗಿಯೂ ಸಹಾಯಕವಾಗಿದ್ದ ಕಾರ್ಯಗಳು ಇದ್ದವು.

1. ಪ್ರತಿಯೊಂದು ಸಂಘಟನೆಗೆ ಮಾರ್ಗದರ್ಶಿಗಳಿರತಕ್ಕದ್ದು. ಸಭೆಯು ಅನುಸರಿಸಲಿಕ್ಕೆ ಕ್ರಮ ನಿಯಮಗಳನ್ನು ಯಾರು ನಿರ್ಧರಿಸಿರುತ್ತಾರೆ? [ಓದಿರಿ ಯಾಕೋಬ 4:12 ಮತ್ತು ಅಪೊಸ್ತಲರ ಕೃತ್ಯಗಳು 3:23, 24.] ಸಭೆಯ ಶಿರಸ್ಸಿನಂತೆ ಆತನ ಹುದ್ದೆಯಲ್ಲಿ ಯೇಸು *ಏನಾಗಿರುತ್ತಾನೆ?* [ಖಾಲಿಯಾದ ಸ್ಥಳದಲ್ಲಿ "ನಿಬಂಧನೆಯನ್ನು ಕೊಡುವಾತನು" ಎಂದು ತುಂಬಿರಿ.] ವಿಧಿನಿಬಂಧನೆಗಳನ್ನು ಕೊಡುವವರು ಸಭೆಗೆ ಎಷ್ಟು ಜನರಿದ್ದಾರೆ? ಸಭೆಗೆ ಒಬ್ಬನೇ ಒಬ್ಬನು ನಿಬಂಧನೆಗಳನ್ನು ಕೊಡುವಾತನಿದ್ದಾನೆ. ತನ್ನ ನಿಬಂಧನೆಗಳಿಗೆ ವಿಧೇಯರಾಗದ ಎಲ್ಲರನ್ನೂ ಆತನು ನಾಶಪಡಿಸುತ್ತಾನೆ.

[ಹಿಂಬದಿಯಲ್ಲಿ ಪುಟದ ಮೇಲ್ಗಡೆಯಲ್ಲಿ ಒಂದು ಬಾಕ್ಸ್‌ನ್ನು ಚಿತ್ರಿಸಿ, ಅದರಲ್ಲಿ "ಯೇಸು" ಎಂದು ಬರೆಯಿರಿ. ಪುಟ 180ನ್ನು ನೋಡಿರಿ.]

2. ಅಪೊಸ್ತಲರಿಗೆ ಶಾಸನಗಳನ್ನು ಮಾಡುವ ಅಧಿಕಾರವಿರಲಿಲ್ಲ, ನಿಬಂಧನೆಗಳನ್ನು, ನಿಯಮಗಳನ್ನು ಮತ್ತು ಕ್ರಮಗಳನ್ನು ಮಾಡುವ ಹಕ್ಕು ಇರಲಿಲ್ಲ. ಅವರ ಜವಾಬ್ದಾರಿಕೆ ಏನಾಗಿತ್ತು? [ಓದಿರಿ ಮತ್ತಾಯ 28:20.] ಸಭೆಯು ಮಾಡಲಿಕ್ಕೆ ಅವರು ಏನನ್ನು ಬೋಧಿಸಬೇಕಾಗಿತ್ತು? [ಖಾಲಿಯಾದ ಸ್ಥಳದಲ್ಲಿ "ಕೈಕೊಳ್ಳಬೇಕು" ಎಂದು ತುಂಬಿರಿ.] ಜನರ ಮೇಲೆ ನಿಯಮಗಳನ್ನು ಬಂಧಿಸಲು ಅವರಿಗೆ ಅಧಿಕಾರವಿರಲಿಲ್ಲ. ಅವರು ಬೋಧಿಸಬೇಕೆಂದು ಯೇಸುವು ಅವರಿಗೆ ನಿರ್ದೇಶಿಸಿದ್ದ ಸಂಗತಿಗಳಿಗೆ ವಿಧೇಯರಾಗಲು ಜನರಿಗೆ ಬೋಧಿಸುವುದು ಅವರ ಜವಾಬ್ದಾರಿಕೆಯಾಗಿತ್ತು.

3. ಯೇಸುವು ತಂದೆಯ ಬಳಿಗೆ ಏರಿಹೋದನಂತರ ತನ್ನ ಬೋಧನೆಯನ್ನು ಪ್ರಕಟಿಸಲು ವಿವಿಧ ಜನರನ್ನು ಉಪಯೋಗಿಸಿದನು, ಆತನು ಯಾರಿಗೆ ತನ್ನ ಬೋಧನೆಯನ್ನು ಪ್ರಕಟಿಸಿದನು? [ಓದಿರಿ ಎಫೆಸ 3:3-5.] ಆತನು ಅದನ್ನು ಯಾರಿಗೆ

ಪ್ರಕಟಿಸಿದನು? [ಖಾಲಿಯಾದ ಸ್ಥಳದಲ್ಲಿ "ಅಪೊಸ್ತಲರು" ಮತ್ತು "ಪ್ರವಾದಿಗಳು" ಎಂದು ತುಂಬಿರಿ.]

4. ಪರಿಶುದ್ಧಾತ್ಮನ ಮುಖಾಂತರ ಯೇಸುವು ಅಪೊಸ್ತಲರಿಗೆ ಎಲ್ಲಾ ಸತ್ಯವನ್ನು ಪ್ರಕಟಿಸಿದನು. ಅವರು ಮಾತಾಡಿದಾಗ, ಅವರು ಅವರ ಮಾತನ್ನು ಕೇಳಿದವರಿಗೆ ಯೇಸುವಿನ ಸಂಗತಿಗಳನ್ನು ವರ್ಗಾಯಿಸುತ್ತಿದ್ದರು (ಯೋಹಾನ 16:13-15). ಅಪೊಸ್ತಲರು ಬೋಧಿಸಿದ್ದಕ್ಕೆ ನಾವು ವಿಧೇಯರಾದರೆ, ಅದರಿಂದ, ನಾವು ಯೇಸುವಿಗೆ ವಿಧೇಯರಾಗುತ್ತಿರುವೆವು. ಸಭೆಯು ಯಾರ ಬೋಧನೆಯಲ್ಲಿ ಮುಂದುವರಿಯಿತೆಂದು ಹೇಳಲ್ಪಟ್ಟಿದೆ? [ಓದಿರಿ ಅಪೊಸ್ತಲರ ಕೃತ್ಯಗಳು 2:42.] ಅವರು *ಯಾರ* ಬೋಧನೆಯಲ್ಲಿ ಮುಂದುವರಿದರು? [ಖಾಲಿಯಾದ ಸ್ಥಳದಲ್ಲಿ "ಅಪೊಸ್ತಲರ" ಎಂದು ತುಂಬಿರಿ.] ಅಪೊಸ್ತಲರು ತಮ್ಮ ಬೋಧನೆಯನ್ನು ಯೇಸುವಿನಿಂದ ಹೊಂದಿಕೊಂಡಿದ್ದರು, ಆದುದರಿಂದ ಅಪೊಸ್ತಲರ ಬೋಧನೆಯಲ್ಲಿ ಮುಂದುವರಿಯುವದರಿಂದ, ಯೇಸುವಿನ ಬೋಧನೆಯಲ್ಲಿ ಅವರು ಮುಂದುವರಿದಿದ್ದರು.

[*ಹಿಂಬದಿಯಲ್ಲಿ* "ಯೇಸು" ಎಂಬುದರ ಕೆಳಗೆ ಒಂದು ಬಾಕ್ಸ್ ತೆಗೆಯಿರಿ ಮತ್ತು ಅದರಲ್ಲಿ "ಅಪೊಸ್ತಲರು ಹಾಗೂ ಪ್ರವಾದಿಗಳು" ಎಂದು ಬರೆಯಿರಿ. ಆ ಮೇಲೆ "ಅಪೊಸ್ತಲರು ಹಾಗೂ ಪ್ರವಾದಿಗಳು" ಕೆಳಗೆ ಹಲವಾರು ವೈಯಕ್ತಿಕ ಬಾಕ್ಸ್‌ಗಳನ್ನು ಚಿತ್ರಿಸಿರಿ. ಪುಟ 180ನ್ನು ನೋಡಿರಿ.] ಸಭೆಗಳು ಅಪೊಸ್ತಲರಿಗೆ ಮತ್ತು ಪ್ರವಾದಿಗಳಿಗೆ ಜವಾಬ್ದಾರಿಕೆಯುಳ್ಳವುಗಳಾಗಿದ್ದವು ಯಾಕಂದರೆ ಯೇಸುವು ಅವರ ಮುಖಾಂತರ ತನ್ನ ಬೋಧನೆಗಳನ್ನು ಕೊಟ್ಟನು.

5. ಸ್ಥಳಿಕ ಸಭೆಗಳಲ್ಲಿ ನಾಯಕರಿಗೆ ಸಭೆಗಾಗಿ ನಿಯಮಗಳನ್ನು ಮಾಡುವ ಅಧಿಕಾರವಿರಲಿಲ್ಲ. ಅವರ ಜವಾಬ್ದಾರಿಕೆಯು ಯೇಸುವಿನ ನಿರ್ದೇಶನಗಳನ್ನು ಸಭೆಗಳಲ್ಲಿ ಕೈಕೊಳ್ಳುವಂತೆ ನಡಿಸುವದಾಗಿತ್ತು. ಯಾವುದನ್ನು ಮಾಡುವದಕ್ಕಾಗಿ ಇವರು ಹಿರಿಯರೆಂದು ಕರೆಯಲ್ಪಟ್ಟರು? [ಓದಿರಿ 1 ಪೇತ್ರ 5:1, 2.] ಅವರು ಮಂದೆಗಾಗಿ ಏನು ಮಾಡಬೇಕಾಗಿತ್ತು? [ಖಾಲಿಯಾದ ಸ್ಥಳದಲ್ಲಿ "ಮೇಯಿಸು" ಎಂದು ತುಂಬಿರಿ.] "ಮೇಯಿಸು" ಎಂಬುದು ಭಾಷಾಂತರಿಸಲ್ಪಟ್ಟ ಗ್ರೀಕ ಪದವು *poimaino.* ಇದನ್ನು "ಪಾಲಿಸು" ಇಲ್ಲವೇ "ಮಂದೆಯನ್ನು ಕಾಯುವವನು" ಎಂದು ಭಾಷಾಂತರಿಸಬಹುದು. ಹಿರಿಯರು ಮಂದೆಯನ್ನು ಕಾಯಬೇಕು. ಹಿರಿಯರು ಇನ್ನೂ *ಏನನ್ನು* ಮಾಡಬೇಕು? [ಖಾಲಿಯಾದ ಸ್ಥಳದಲ್ಲಿ "ಮೇಲ್ವಿಚಾರಣೆ ಮಾಡಬೇಕು" ಎಂದು ತುಂಬಿರಿ.]

6. ಪೌಲನು ಎಫೆಸದಲ್ಲಿಯ ಸಭೆಯ ನಾಯಕರಿಗೆ ನಿರ್ದೇಶನವನ್ನು ಕೊಟ್ಟನು. ಅವರು ಏನೆಂದು ಕರೆಯಲ್ಪಟ್ಟರು? [ಓದಿರಿ ಅಪೊಸ್ತಲರ ಕೃತ್ಯಗಳು 20:17.] ಸಭೆಯ ನಾಯಕರಿಗೆ ಸಂಬಂಧಿಸಿ *ಯಾವ* ಪದ ಉಪಯೋಗಿಸಲ್ಪಟ್ಟಿದೆ? [ಖಾಲಿಯಾದ ಸ್ಥಳದಲ್ಲಿ "ಹಿರಿಯರು" ಎಂದು ತುಂಬಿರಿ.] ಅವರು ಏನು ಮಾಡಬೇಕೆಂದು ಹೇಳಲ್ಪಟ್ಟರು? [ಓದಿರಿ ಅಪೊಸ್ತಲರ ಕೃತ್ಯಗಳು 20:28.] ಅವರು *ಯಾವ ಎರಡು ಸಂಗತಿಗಳನ್ನು* ಮಾಡಬೇಕಾಗಿತ್ತು? [ಖಾಲಿಯಾದ ಸ್ಥಳದಲ್ಲಿ "ಕಾಯುವುದು" ಮತ್ತು "ಮೇಲ್ವಿಚಾರಣೆ ಮಾಡುವುದು" ಎಂದು ತುಂಬಿರಿ.]

ಸಭೆಗಳಿಗೆ ನಾಯಕರುಗಳಿಗೆ ಸಂಬಂಧಿಸಿ ಮೂರು ಮಾತುಗಳು ಉಪಯೋಗಿಸಲ್ಪಟ್ಟಿವೆ. ಅವು ಹುದ್ದೆಗಳಲ್ಲ ಆದರೆ ತಮ್ಮ ಹುದ್ದೆಗಳಲ್ಲಿರುವ ನಾಯಕರ ವಿವರಣೆಗಳಾಗಿವೆ. "ಹಿರಿಯರು" ಎಂಬ ಮಾತು ಅವರು ಹೊಸ ಕ್ರೈಸ್ತರಲ್ಲ ಆದರೆ ವಿಶ್ವಾಸದಲ್ಲಿ ಪ್ರೌಢಾವಸ್ಥೆ ಹೊಂದಿದ ಜನರೊಳಗಿಂದ ಆಯ್ಕೆ ಮಾಡಲ್ಪಟ್ಟವರೆಂದು ಅನ್ವಯಿಸುತ್ತದೆ. ಸಮಾಜದ ನಾಯಕರು ಸಾಮಾನ್ಯವಾಗಿ "ಹಿರಿಯರು" ಎಂದು

ಕರೆಯಲ್ಪಟ್ಟರು. "ಮೇಯಿಸು" (ಗ್ರೀಕ ಪದ *poimaino*ದಿಂದ) ಎಂಬ ಮಾತು "ಕುರುಬ" ಇಲ್ಲವೇ "ಪಾಸ್ಟರ್" ಎಂಬುವುದು ಕುರಿಮಂದೆಯನ್ನು ಕಾಯುವ ಇಲ್ಲವೇ ಪಾಲಿಸುವ ಅರ್ಥಕೊಡುತ್ತದೆ. "ಮೇಲ್ವಿಚಾರಕ" "ಬಿಷಪ್" ಮಾತಿನ (*episkopos* ಗ್ರೀಕ ಪದದಿಂದ) ಅರ್ಥ ಸಭೆಯ ವ್ಯವಹಾರಗಳನ್ನು ನಿರ್ದೇಶಿಸುವುದು ಎಂಬುದು. ಇವು ಮೂರು ಭಿನ್ನವಾದ ಹುದ್ದೆಗಳಲ್ಲ, ಆದರೆ ಒಂದೇ ಹುದ್ದೆಯನ್ನು ವಿವರಿಸುವ ಮೂರು ಭಿನ್ನವಾದ ಮಾತುಗಳಾಗಿವೆ. [*ಹಿಂಬದಿಯಲ್ಲಿ* "ಅಪೊಸ್ತಲರು ಮತ್ತು ಪ್ರವಾದಿಗಳು" ಎಂಬುದರ ಖಾಲಿಯಾದ ಚೌಕದಲ್ಲಿ "ಹಿರಿಯರು" ಎಂದು ಬರೆಯಿರಿ. ಪುಟ 180ನ್ನು ನೋಡಿರಿ.]

ಇವರು ತಾವು ಸದಸ್ಯರಾಗಿದ್ದ ಸಭೆಯ ಸಭಾಪಾಲಕರು, ಮೇಲ್ವಿಚಾರಕರೂ ಆಗಿದ್ದ ಪುರುಷರಾಗಿದ್ದರು. ಅವರಿಗೆ ಮಾನವ ಮುಖ್ಯ ಕಛೇರಿಗಳಿರಲಿಲ್ಲ, ಆದರೆ ಅವರು ಅಪೊಸ್ತಲರ ಮತ್ತು ಪ್ರವಾದಿಗಳ ಅಧೀನತೆಯಲ್ಲಿದ್ದರು, ಅವರು ಕ್ರಿಸ್ತನ ಅಧೀನತೆಯಲ್ಲಿದ್ದರು, ಅವರ ಅಧೀನತೆಯಲ್ಲಿ ಸೇವೆ ಹೊಂದುತ್ತಿದ್ದ ಸಭೆಗಳಿಗಾಗಿ ನಿಯಮಗಳನ್ನು ಮಾಡಲು ಅವರಿಗೆ ಅಧಿಕಾರವಿರಲಿಲ್ಲ ಅವರು ಕಾನೂನು ರಚಿಸುವವರಾಗಿರಲಿಲ್ಲ ಆದರೆ ನಾಯಕರಾಗಿದ್ದರು.

ಅವರು "ಪ್ರಸಂಗಿಯಾಗಲೀ" ಇಲ್ಲವೇ "ಸಭಾಪಾಲಕರಾಗಲೀ" ಇರಲಿಲ್ಲ. ಸಭೆಯ ನಾಯಕತ್ವವು ಹಿರಿಯರ ಕೈಗಳಲ್ಲಿತ್ತು, ಹಿರಿಯರು ಬಿಷಪ್‌ರಂತೆ (overseers) ಮತ್ತು ಪಾಸ್ಟರರು (shepherds) ಎಂದೂ ತಿಳಿಯಲ್ಪಟ್ಟಿದ್ದರು.

7. ಹಿರಿಯರ ಅಧೀನತೆಯಲ್ಲಿ ಸೇವೆ ಮಾಡುತ್ತಿದ್ದವರು ಯೇಸುವಿನ ಬೋಧನೆಯನ್ನು ಪ್ರಸಾರ ಮಾಡಲು ಸಹಾಯ ಮಾಡಿದವರು, ಸುವಾರ್ತಿಕರು ಆಗಿದ್ದರು, ಪೌಲನು ಅವರಿಗೆ ಯಾವ ನಿರ್ದೇಶನ ಕೊಟ್ಟನು? [ಓದಿರಿ 2 ತಿಮೊಥೆ 4:2, 5.] ಸುವಾರ್ತಿಕನ ಕೆಲಸವು *ಯಾವುದಾಗಿತ್ತು?* [ಖಾಲಿಯಾದ ಸ್ಥಲದಲ್ಲಿ "ಪ್ರಸಂಗಿಸು" ಎಂದು ತುಂಬಿರಿ. *ಹಿಂಬದಿಯಲ್ಲಿ* ಚೌಕದಲ್ಲಿ "ಸುವಾರ್ತಿಕರು" ಎಂದು ತುಂಬಿರಿ. ಪುಟ 180ನ್ನು ನೋಡಿರಿ.] ಸುವಾರ್ತಿಕರು ವಾಕ್ಯವನ್ನು ಸಾರಬೇಕಾಗಿತ್ತು. ಕ್ರೈಸ್ತರಿಗೆ ಪ್ರಸಂಗಿಸಲು ಒಂದೇ *ಒಂದು ವಾಕ್ಯ,* ಸಂದೇಶ ಇತ್ತು. ಮತ್ತು ಆ ಸಂದೇಶವು ಅಪೊಸ್ತಲರ ಮತ್ತು ಪ್ರವಾದಿಗಳ ಮುಖಾಂತರ ಯೇಸುವು ಕೊಟ್ಟದ್ದಾಗಿತ್ತು. ಸಭೆಗಾಗಿ ಕಾನೂನುಗಳನ್ನೂ ನಿಯಮಗಳನ್ನೂ ಮಾಡುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿರಲಿಲ್ಲ. ಅವರು ಕೊಡಬೇಕಾದ ಸಂದೇಶವು ಯೇಸುವಿನೊಂದಿಗೆ ಪ್ರಾರಂಭವಾದ ಸಂದೇಶವಾಗಿತ್ತು.

8. ಹಿರಿಯರ ನೇತೃತ್ವದಲ್ಲಿ ಸೇವೆ ಮಾಡಿದವರು ಬೋಧಕರೂ ಇದ್ದರು. ಅವರು ಏನು ಮಾಡಬೇಕಾಗಿತ್ತು? [ಓದಿರಿ 2 ತಿಮೊಥೆ 2:2.] ಬೋಧಕರ ಜವಾಬ್ದಾರಿಕೆಯು *ಏನಾಗಿತ್ತು?* [ಖಾಲಿಯಾದ ಸ್ಥಳದಲ್ಲಿ "ಬೋಧಿಸು" ಎಂದು ತುಂಬಿರಿ. *ಹಿಂಬದಿಯಲ್ಲಿ,* ಚೌಕದಲ್ಲಿ "ಬೋಧಕರು" ಎಂದು ಬರೆಯಿರಿ. ಪುಟ ಪುಟ 180ನ್ನು ನೋಡಿರಿ.] ಅವರು ಅಪೊಸ್ತಲರಿಂದ ಕಲಿತುಕೊಂಡದ್ದನ್ನು, ಈ ವಿಷಯದಲ್ಲಿ ಅಪೊಸ್ತಲ ಪೌಲನಿಂದ ಕಲಿತುಕೊಂಡದ್ದನ್ನು ಬೋಧಿಸಬೇಕಾಗಿತ್ತು. ಪೌಲನು ತನ್ನ ಸಂದೇಶವನ್ನು ಪರಿಶುದ್ಧಾತ್ಮನ ಮುಖಾಂತರ ಯೇಸುವಿನಿಂದ ಹೊಂದಿಕೊಂಡಿದ್ದನು (ಎಫೆಸ 3:3-5). ಬೋಧಕರು ಇತರರಿಗಾಗಿ ನಿಯಮಗಳನ್ನು ಮಾಡಬೇಕಾಗಿರಲಿಲ್ಲ ಆದರೆ ಅದರ ಬದಲು ಅಪೊಸ್ತಲರಿಗೆ ಮತ್ತು ಪ್ರವಾದಿಗಳಿಗೆ ಯೇಸುವು ಕೊಟ್ಟ ಸಂದೇಶವನ್ನು ಇತರರಿಗೆ ಬೋಧಿಸಬೇಕಾಗಿತ್ತು.

9. ನಾಯಕತ್ವದ ಜವಾಬ್ದಾರಿಕೆಯಿಲ್ಲದ ಬೇರೆ ಇತರರೂ ಸಭೆಯಲ್ಲಿದ್ದರು. ಅವರು ಯಾರಾಗಿದ್ದರು? [ಓದಿರಿ 1 ತಿಮೊಥೆ 3:8.] ಅವರು *ಏನೆಂದು* ಕರೆಯಲ್ಪಟ್ಟಿದ್ದರು?

[ಖಾಲಿಯಾದ ಸ್ಥಳದಲ್ಲಿ “ಡೀಕನರು” ಎಂದು ತುಂಬಿರಿ. ಹಿಂಬದಿಯಲ್ಲಿ ಚೌಕದಲ್ಲಿ “ಡೀಕನರು” ಎಂದು ಬರೆಯಿರಿ. ಪುಟ 180ನ್ನು ನೋಡಿರಿ.] ಡೀಕನ್ ಎಂಬ ಪದವು *diakonos* ಎಂಬ ಪದದಿಂದ ಬಂದಿರುತ್ತದೆ. ಈ ಪದದ ಅರ್ಥ ಸೇವೆ ಮಾಡು ಇಲ್ಲವೇ ಸಭಾಸೇವೆಮಾಡು ಎಂದಾಗುತ್ತದೆ. ಈ ಜನರಿಗೆ ಮೇಲ್ವಿಚಾರಣೆಯ ಜವಾಬ್ದಾರಿಕೆ ಕೊಡಲ್ಪಟ್ಟಿರಲಿಲ್ಲ; ಅದರ ಬದಲು ಸಭೆಯಲ್ಲಿ ಅಗತ್ಯವಾದ ಸೇವೆಯನ್ನು ಕೈಕೊಳ್ಳುವಂತೆ ಹಿರಿಯರಿಂದ ಕೇಳಲ್ಪಡುವದಕ್ಕೆ ಜವಾಬ್ದಾರರಾಗಿದ್ದ ಜನರಾಗಿದ್ದರು.

10. ಸಭೆಗಳಲ್ಲಿ ಮಹಿಳೆಯರು ಬಹಳ ಮಹತ್ವವುಳ್ಳವರಾಗಿದ್ದರು. ಸಭೆಯಲ್ಲಿಯ ಅತಿ ದೊಡ್ಡ ಕೆಲಸದ ಕೆಲವರೊಂದಿಗೆ ಅವರು ಸೇವೆ ಮಾಡಿದರು (ಫಿಲಿಪ್ಪಿ 4:3) ಮಹಿಳೆಯರ ಮೇಲೆ ಕೆಲವು ನಿರ್ಬಂಧಗಳು ಹಾಕಲ್ಪಟ್ಟಿದ್ದವು. ಮಹಿಳೆಯರ ಪಾತ್ರದ ಬಗ್ಗೆ ಪೌಲನು ಏನನ್ನು ಬರೆದನು? [ಓದಿರಿ 1 ಕೊರಿಂಥ 14:34, 35; 1 ತಿಮೊಥೆ 2:10-12.] ಮಹಿಳೆಯರ ಮೇಲೆ *ಯಾವ* ನಿರ್ಬಂಧಗಳು ಹಾಕಲ್ಪಟ್ಟವು? [ಖಾಲಿಯಾದ ಸ್ಥಳದಲ್ಲಿ “ಮೌನವಾಗಿರಬೇಕು” ಎಂದು ತುಂಬಿರಿ.]

ಪ್ರತಿಯೊಬ್ಬ ಕ್ರೈಸ್ತನಿಗೆ ನಿರ್ಬಂಧಗಳಿರುತ್ತವೆ ಮತ್ತು ಎಲ್ಲರೂ ಒಂದೇ ಸಾಮರ್ಥ್ಯದಲ್ಲಿ ಸೇವೆ ಮಾಡುವದಿಲ್ಲ (1 ಕೊರಿಂಥ 12:28, 29). ಕೆಲವು ಜನ ಪುರುಷರು ಮಾತ್ರವೇ ನೇಮಿಸಲ್ಪಟ್ಟ ಹಿರಿಯರಂತೆ ಸೇವೆ ಮಾಡಬಲ್ಲರು, ಮತ್ತು ಎಲ್ಲರೂ ಸುವಾರ್ತಿಕರಲ್ಲ ಇಲ್ಲವೇ ಡೀಕನರಲ್ಲ, ಇಲ್ಲವೇ ಬೋಧಕರಲ್ಲ. ಪುರುಷರಂತೆ ಮಹಿಳೆಯರೂ ಕೂಡ *ಕೇವಲ ಎರಡು* ನಿರ್ಬಂಧಗಳೊಂದಿಗೆ ಪ್ರತಿಯೊಂದು ಸಾಮರ್ಥ್ಯದಲ್ಲಿ ಸೇವೆ ಮಾಡಬಹುದು: ಕೂಟಗಳಲ್ಲಿ ಅವರು ನಾಯಕತ್ವ ಪಾತ್ರ ವಹಿಸಬಾರದು ಮತ್ತು ಸಭೆಗಳಲ್ಲಿ ನಾಯಕಿಯರಾಗಿ ನೇಮಿಸಲ್ಪಡಬಾರದು. ಕುಟುಂಬಗಳಲ್ಲಿರುವ ಮಕ್ಕಳೊಂದಿಗೆ ಅವರ ಸಂಬಂಧದ ಕಾರಣದಿಂದ ಮಹಿಳೆಯರಿಗೆ ಮಕ್ಕಳ ಮುಖಾಂತರವಾಗಿ ಪುರುಷರಿಗಿರುವಷ್ಟು ಪ್ರಭಾವವು ಇರುವುದು. ಮಕ್ಕಳನ್ನು ಹೆರುವದರಿಂದ ಹಾಗೂ ಬೆಳಸುವದರಿಂದ (1 ತಿಮೊಥೆ 2:15) ಮಕ್ಕಳನ್ನು ಹೇರುವದರ ಮುಖಾಂತರ ಮತ್ತು ಬೆಳಸುವದರ ಮುಖಾಂತರ (1 ತಿಮೊಥೆ 2:5) ಮಹಿಳೆಯಂತೆ ತನ್ನ ಪಾತ್ರದಲ್ಲಿ ಗೌರವ ಹೊಂದುವಳು ಮತ್ತು ರಕ್ಷಿಸಲ್ಪಡುವಳು, ಈ ಪಾತ್ರ ಪುರುಷರಿಗೆ ಲಭ್ಯವಿರುವದಿಲ್ಲ.

11. ಅಪೊಸ್ತಲರ ಮತ್ತು ಪ್ರವಾದಿಗಳ ಮುಖಾಂತರ ಕೊಡಲ್ಪಟ್ಟ ನಿರ್ದೇಶನಗಳನ್ನು ತಿಳಿದವರಿಂದ ಸದಸ್ಯರು ಮಾರ್ಗದರ್ಶನ ಹೊಂದಬೇಕಾಗಿತ್ತು. ಸಭೆಯಲ್ಲಿಯ ನಾಯಕರಿಗೆ ಅವರು ಹೇಗೆ ಉತ್ತರ ಕೊಡಬೇಕಾಗಿತ್ತು? [ಓದಿರಿ ಇಬ್ರಿಯ 13:17.] ಅವರ ಮೇಲಿರುವವರಿಗೆ ಅವರು ಹೇಗೆ ಉತ್ತರ ಕೊಡಬೇಕಾಗಿತ್ತು? [ಖಾಲಿಯಾದ ಸ್ಥಳದಲ್ಲಿ “ವಿಧೇಯನಾಗು” ಎಂದು ತುಂಬಿರಿ. ಹಿಂಬದಿಯ ಚೌಕದಲ್ಲಿ “ಸದಸ್ಯರು” ಎಂದು ಬರೆಯಿರಿ. ಪುಟ 180ನ್ನು ನೋಡಿರಿ.] ನಾಯಕರು ಸದಸ್ಯರನ್ನು ಯೇಸುವಿನಿಂದ ಬೋಧಿಸಲ್ಪಟ್ಟ ಜೀವನ ಮತ್ತು ಆರಾಧನೆಯಲ್ಲಿ ನಡಿಸಬೇಕಾಗಿತ್ತು. ಸಭೆಯು ತನ್ನ ನಾಯಕರಿಗೆ ಅವರು ಆತ್ಮಿಕ ಮಾರ್ಗದರ್ಶನವನ್ನು ಕೊಡುವಂತೆ ಅವರಿಗೆ ಕೂಡಲೇ ಉತ್ತರ ಕೊಡಬೇಕಾಗಿತ್ತು.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಸಭೆಯು ಯೋಗ್ಯವಾಗಿ ರಚಿಸಲ್ಪಟ್ಟಾಗ, ಯೇಸುವು ಎಲ್ಲಾ ಸಭೆಯ ಮೇಲೆ ಶಿರಸ್ಸಾಗಿದ್ದಾನೆ ಎಂದು ಕಲಿತುಕೊಂಡಿದ್ದೇವೆ. ಹೊಸ ಒಡಂಬಡಿಕೆಯ ಅಪೊಸ್ತಲರ ಮತ್ತು ಪ್ರವಾದಿಗಳ ಮುಖಾಂತರ, ಸಭೆಗೆ ಅನುಸರಿಸಲು ಅಗತ್ಯವಾದ ಬೋಧನೆಗಳನ್ನು ಯೇಸುವು ಕೊಟ್ಟನು. ಯೇಸುವಿನ ಹುದ್ದೆಗಳು, ಅಪೊಸ್ತಲರು ಮತ್ತು ಪ್ರವಾದಿಗಳು ಸಭೆಯಲ್ಲಿ ಸ್ಥಿರವಾದ ಹುದ್ದೆಗಳಾಗಿದ್ದವು. ಇವುಗಳಿಗೆ ಉತ್ತರಾಧಿಕಾರಿಗಳಿರಲಿಲ್ಲ ಅಂದರೆ ಅವರ ಬದಲು

ಬೇರಾರೂ ಇಡಲ್ಪಡುವದಿಲ್ಲ. ಸಭೆಗೆ ಎಂದಾದರೂ ಇದ್ದ ನಿಜವಾದ ಅಪೊಸ್ತಲರೂ ಪ್ರವಾದಿಗಳೂ, ಹೊಸ ಒಡಂಬಡಿಕೆಯನ್ನು ಕೊಟ್ಟವನಾದ, ಯೇಸುವು ಪರಲೋಕಕ್ಕೆ ಹಿಂದಿರುಗಿ ಹೋದನಂತರದ ಅವಧಿಯಲ್ಲಿ ಸೇವೆ ಮಾಡಿದವರಾಗಿದ್ದರು. ಒಂದೇ ಸಲ ಮತ್ತು ಎಲ್ಲರಿಗಾಗಿ ಕೊಡಲ್ಪಟ್ಟ ಯೇಸುವಿನ ಚಿತ್ತವನ್ನು ಕಲಿತುಕೊಳ್ಳುವದಕ್ಕೆ ಅವುಗಳನ್ನು ಸಭೆಯು ಹಿಂದಿರುಗಿ ನೋಡತಕ್ಕದ್ದು (ಯೂದ 3). ಕ್ರಿಸ್ತನ ಸಭೆಯು ಯೇಸುವಿನಿಂದ ಸಂಘಟಿತ ರೂಪದಲ್ಲಿ ಸಿದ್ಧಪಡಿಸಿದ್ದರಲ್ಲಿ ಯೇಸುವು ಮಾಡಲು ಹೇಳಿದ ಕಾರ್ಯವನ್ನು ಮಾಡುವ ಜನರ ಗುಂಪಾಗಿತ್ತು.

## IV. ನಾಯಕರುಗಳ ಸಂಖ್ಯೆ

1. ಪಾಠದ ಪ್ರಾರಂಭದಲ್ಲಿ, ಹಿರಿಯರು ಸಭೆಗಳಲ್ಲಿಯ ನಾಯಕರಾಗಿದ್ದರು ಎಂದು ನಾವು ಕಲಿತುಕೊಂಡಿದ್ದೇವೆ. ಪ್ರತಿಯೊಂದು ಸಭೆಯಲ್ಲಿ ಒಬ್ಬ ಹಿರಿಯನು (ಪಾಸ್ಟರ, ಬಿಷಪ್) ಇದ್ದನೋ ಇಲ್ಲವೇ *ಹಲವಾರು* ಹಿರಿಯರು ಇದ್ದರೋ? [ಓದಿರಿ ಅಪೊಸ್ತಲರ ಕೃತ್ಯಗಳು 14:23; ತೀತ 1:5.] ಪ್ರತಿಯೊಂದು ಸಭೆಗೆ *ಒಬ್ಬನೇ* ಒಬ್ಬ ಹಿರಿಯನು ಆಯ್ಕೆ ಮಾಡಲ್ಪಟ್ಟನೋ ಇಲ್ಲವೇ ಒಬ್ಬನಿಗಿಂತ ಹೆಚ್ಚು ಜನರು ಆಯ್ಕೆಮಾಡಲ್ಪಟ್ಟರೋ? [ಖಾಲಿಯಾದ ಸ್ಥಳದಲ್ಲಿ "ಹಿರಿಯರು" ಎಂದು ತುಂಬಿರಿ.] ಹಿರಿಯರು ಆಯ್ಕೆಮಾಡಲ್ಪಟ್ಟರು ಎಂಬುದು ಒಬ್ಬನಿಗಿಂತ ಹೆಚ್ಚು ಜನ ಹಿರಿಯರನ್ನು ಸಭೆಗಳು ಆಯ್ದುಕೊಂಡವು ಎಂಬುದನ್ನು ಅನ್ವಯಿಸುತ್ತದೆ.

2. ಅಪೊಸ್ತಲರ ಕೃತ್ಯಗಳ ಗ್ರಂಥವು ಸಂಘಟಿಸಲ್ಪಟ್ಟ ನಂತರದ ಸಭೆಗಳ ಬಗ್ಗೆ ಹೇಳುತ್ತದೆ. ಸಭೆಗಳು *ಒಬ್ಬನೇ* ಹಿರಿಯನನ್ನು ಒಳಗೊಂಡಿದ್ದಂತೆ ವಿವರಿಸಲ್ಪಟ್ಟಿರುವವೋ? [ಓದಿರಿ ಅಪೊಸ್ತಲರ ಕೃತ್ಯಗಳು 15:2; 20:17; ಫಿಲಿಪ್ಪಿ 1:1.] ಸಭೆಗಳಿಗೆ ಒಬ್ಬ ಹಿರಿಯನಿದ್ದನೋ ಇಲ್ಲವೋ ಹಿರಿಯರಿದ್ದರೋ? [ಖಾಲಿಯಾದ ಸ್ಥಳದಲ್ಲಿ "ಹಿರಿಯರು" ಎಂದು ತುಂಬಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಕರ್ತನ ಸಭೆಗಳು ಒಬ್ಬ ಮನುಷ್ಯನ ಆಳಿಕೆಯನ್ನು ರೂಢಿಸಲಿಲ್ಲ ಎಂಬುದನ್ನು ಕಲಿತುಕೊಂಡಿದ್ದೇವೆ. ಸಭೆಗಳ ವ್ಯವಹಾರಗಳನ್ನು ಒಬ್ಬ ಮನುಷ್ಯನು ಮೇಲ್ವಿಚಾರಣೆ ಮಾಡಲಿಲ್ಲ. ಪ್ರತಿಯೊಂದು ಸಭೆಗೆ ಇಬ್ಬರು ಇಲ್ಲವೇ ಹೆಚ್ಚು ನೇಮಿತನಾಯಕರಿದ್ದರು, ಸಭೆಯ ಹಿರಿಯ (ಒಬ್ಬ ಹಿರಿಯ) "ಹಿರಿಯ" ಎಂಬ ಸಂಗತಿಯು, ಎಂದೂ ಹೇಳಲ್ಪಟ್ಟಿಲ್ಲ, ಆದರೆ ಅದರ ಬದಲು ಒಂದು ಸಭೆಗೆ "ಹಿರಿಯರು" ಯಾವಾಗಲೂ ನೇಮಿಸಲ್ಪಟ್ಟರು ಎಂಬ ಉಲ್ಲೇಖವಿರುವದರಿಂದ ಪ್ರತ್ಯಕ್ಷವಾಗುತ್ತದೆ.

## V. ಅರ್ಹತೆಗಳು

ಸಭೆಯು ವಿವಿಧ ಹುದ್ದೆಗಳಲ್ಲಿ ಯಾರಾದರೂ ಸೇವೆ ಮಾಡಬಹುದೋ ಇಲ್ಲವೇ ಅರ್ಹತೆಗಳ ಅಗತ್ಯತೆ ಇದೆಯೋ? [1ರಿಂದ 5ರವರೆಗಿನ ಪರಿಶುದ್ಧ ಬರಹಗಳನ್ನು ಓದಿರಿ; ಅಪೊಸ್ತಲರ ಕೃತ್ಯಗಳು 1:21, 22; 1 ತಿಮೊಥೆ 3:1-7; ತೀತ 1:5-9; 1 ತಿಮೊಥೆ 3:8-13; 2 ತಿಮೊಥೆ 2:24, 25; 1 ಪೇತ್ರ 4:11.] ಪ್ರತಿಯೊಂದು ಸಲ ಪರಿಶುದ್ಧ ಬರಹಗಳನ್ನು *ಪರೀಕ್ಷಿಸಿರಿ.* ವಿವಿಧ ಹುದ್ದೆಗಳಲ್ಲಿ ಯಾವುದರಲ್ಲಿಯಾದರೂ ಸೇವೆ ಮಾಡುವ ಮೊದಲು ನಿರ್ಬಂಧಗಳೂ ಅರ್ಹತೆಗಳೂ ಗೌರವಿಸಲ್ಪಡಬೇಕೋ? [ಖಾಲಿಯಾದ ಸ್ಥಳದಲ್ಲಿ "ಹೌದು" ಎಂದು ತುಂಬಿರಿ.] [ಈ ಭಾಗದ ಉದ್ದೇಶವು *ಪ್ರತಿಯೊಂದು* ಹುದ್ದೆಯ ಅರ್ಹತೆಗಳನ್ನು ದೀರ್ಘವಾಗಿ ಚರ್ಚಿಸುವುದಾಗಿರುವದಿಲ್ಲ. ಇದು ಇನ್ನೊಂದು

ಸಮಯದಲ್ಲಿ ಮಾಡಲ್ಪಡಬಹುದು. ಈ ಜವಾಬ್ದಾರಿಕೆಗಳನ್ನು ಯಾವುದೇ ಕ್ರೈಸ್ತನಿಗೆ ವಹಿಸಿಕೊಡಲಾಗದು ಎಂಬುದನ್ನು ಕಲಿಯುವವನು ನೋಡುವಂತೆ ಸಹಾಯಮಾಡುವುದು ಇದರ ಉದ್ದೇಶವಾಗಿದೆ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಸಭೆಗಳಲ್ಲಿ ವಿವಿಧ ಜವಾಬ್ದಾರಿಕೆಗಳನ್ನು ವಹಿಸಿಕೊಂಡಿರುವವರು ಆ ಜವಾಬ್ದಾರಿಕೆಗಳು ಕೊಡಲ್ಪಡುವದಕ್ಕಿಂತ ಮೊದಲು ಅವುಗಳನ್ನು ಹೊಂದಲು ಅರ್ಹತೆಗಳನ್ನು ಹೊಂದಿರಬೇಕು ಎಂಬುದನ್ನು ನಾವು ಕಲಿತುಕೊಂಡಿದ್ದೇವೆ.

**ಸಾರಾಂಶ**

ಈ ಪಾಠದಲ್ಲಿ ಸ್ಪಷ್ಟವಾದ ಒಂದು ಸಂಗತಿಯು ಸಭೆಯಲ್ಲಿ ಪೂರ್ಣ ಅಧಿಕಾರವು ಯೇಸುವಿನೊಂದಿಗಿರುವಂಥದ್ದು. ಆತನು ಸಭೆಯ ಶಿರಸ್ಸು, ಸಭೆಯು ಕಾರ್ಯಮಾಡುವದನ್ನು ಕುರಿತು ನಿರ್ದೇಶಿಸಿದಾತನೂ ಸಂಘಟಿಸಿದಾತನೂ ಆಗಿದ್ದಾನೆ.

I. ಕ್ರಿಸ್ತನ *ಸಭೆಯಲ್ಲಿ ಯಾವ ಹುದ್ದೆಗಳಿದ್ದವು?* ಯೇಸುವು ಶಿರಸ್ಸು. ಆತನ ಅಧೀನತೆಯಲ್ಲಿ ಅಪೊಸ್ತಲರು, ಪ್ರವಾದಿಗಳು, ಸುವಾರ್ತಿಕರು, ಸಭಾಪಾಲಕರು ಮತ್ತು ಬೋಧಕರು ಇರುತ್ತಾರೆ.

II. *ಈ ಹುದ್ದೆಗಳ ಉದ್ದೇಶವು ಯಾವುದು?* ಈ ಹುದ್ದೆಗಳ ಉದ್ದೇಶವು ಸಭೆಯು ಯೇಸುವಿಗೆ ಸಾಕಷ್ಟು ಸೇವೆ ಸಲ್ಲಿಸಲಿಕ್ಕಾಗುವಂತೆ ಸಭೆಯನ್ನು ಕಟ್ಟುವುದು ಮತ್ತು ಬೆಳಸುವುದು.

III. *ಈ ಹುದ್ದೆಗಳ ಜವಾಬ್ದಾರಿಕೆಗಳು ಯಾವವು?* ಯೇಸುವು ಮಾತ್ರವೇ ನಿಯಮವನ್ನು ಕೊಡುವಾತನು. ಅಪೊಸ್ತಲರ ಮತ್ತು ಪ್ರವಾದಿಗಳ ಮುಖಾಂತರ ಸಭೆಗಳು ಅನುಸರಿಸುವದಕ್ಕೆ ಆತನು ನಿರ್ದೇಶನಗಳನ್ನು ಕೊಟ್ಟಿದ್ದಾನೆ. ಪ್ರತಿಯೊಂದು ಸಭೆಯು ಈ ಸಾಮರ್ಥ್ಯದಲ್ಲಿ ಅವುಗಳನ್ನು ನೋಡತಕ್ಕದ್ದು.

ಸ್ಥಳಿಕ ಸಭೆಗಳು ಸುವಾರ್ತಿಕರು, ಬೋಧಕರು, ಡೀಕನರು, ಮಹಿಳೆಯರು ಮತ್ತು ಸದಸ್ಯರು ಇದ್ದ ಹಿರಿಯರಿಂದ ಯೇಸುವಿನ ಸೇವೆಯೊಳಗೆ ನಿರ್ದೇಶಿಸಲ್ಪಟ್ಟು ನಡಿಸಲ್ಪಡುವವು. ಹಿರಿಯರು ಸಭೆಯ ಚಟುವಟಿಕೆಗಳನ್ನು ನಿರ್ದೇಶಿಸಲು ಸಹಾಯ ಮಾಡುವರು ಮತ್ತು ಸದಸ್ಯರ ಆತ್ಮಿಕ ಒಳಿತಿಗಾಗಿ ಕೆಲಸ ಮಾಡುವರು (ಇಬ್ರಿಯ 13:17).

ಪ್ರತಿಯೊಬ್ಬ ಸದಸ್ಯನಿಗೆ ತಾನು ಸದಸ್ಯನಾಗಿರುವ ಸಭೆಯಲ್ಲಿ ಪಾತ್ರವಿರುವುದು. ಎಲ್ಲರೂ ಒಂದೇ ಸಾಮರ್ಥ್ಯದಲ್ಲಿ ಸೇವೆ ಮಾಡುವದಿಲ್ಲ.

IV. *ಎಷ್ಟು ಜನ ಮೇಲ್ವಿಚಾರಕರು (ಹಿರಿಯರು, ಬಿಷಪರು, ಸಭಾಪಾಲಕರು) ಪ್ರತಿಯೊಂದು ಸಭೆಯಲ್ಲಿದ್ದರು?* ಪ್ರತಿಯೊಂದು ಸಭೆಯು ಒಬ್ಬನಿಗಿಂತ ಹೆಚ್ಚು ಹಿರಿಯರಿಂದ ನಡಿಸಲ್ಪಟ್ಟಿತು. ಪ್ರತಿಯೊಂದು ಸಭೆಗೆ ಅದರ ಸ್ವಂತ ಹಿರಿಯರು, ಅದರ ಸ್ವಂತ ಮೇಲ್ವಿಚಾರಕರು, ಅಂದರೆ ಬಿಷಪರು ಮತ್ತು ಸಭಾಪಾಲಕರು ಇದ್ದರು ಹಾಗೂ ಅವರು ಕೇಂದ್ರ ಮಾನವ ಮುಖ್ಯ ಕಛೇರಿಯಿಂದ ನಡಿಸಲ್ಪಡಲಿಲ್ಲ ಇಲ್ಲವೇ ನಿಯಂತ್ರಿಸಲ್ಪಡಲಿಲ್ಲ.

V. ಈ *ಹುದ್ದೆಗಳಲ್ಲಿ ಸೇವೆ ಮಾಡಲು ಒಬ್ಬನಿಗೆ ಕೆಲವೊಂದು ಅರ್ಹತೆಗಳು ಇರಬೇಕೋ?* ಸಭೆಗಳಲ್ಲಿ ಜವಾಬ್ದಾರಿಕೆಗಳನ್ನು ವಹಿಸಿಕೊಡಲ್ಪಟ್ಟವರು ಸೇವೆ ಮಾಡುವದಕ್ಕಿಂತ ಮೊದಲು ಅರ್ಹತೆಯುಳ್ಳವರಾಗಿರಬೇಕಾಗಿತ್ತು.

ಸಭೆಯ ಮೇಲೆ ಅಧಿಕಾರದ ಹಕ್ಕು ಯೇಸುವಿಗೆ ಇರುತ್ತದೆ ಎಂದು ಪರಿಶುದ್ಧಬರಹವು ಸ್ಪಷ್ಟವಾಗಿ ಬೋಧಿಸುತ್ತದೆ. ಬೇರೆ ಯಾರಿಗೂ ಆ ಹಕ್ಕು ಇರುವದಿಲ್ಲ. ಯೇಸುವಿನ ಹಿಂಬಾಲಕರು ಯೇಸುವು ಆಜ್ಞಾಪಿಸಿದ "ಎಲ್ಲವನ್ನೂ ಕೈಕೊಳ್ಳಬೇಕಾಗಿರುವುದು" (ಮತ್ತಾಯ 28:20). ಮನುಷ್ಯನ ಬೋಧನೆಗಳನ್ನೂ ಆಜ್ಞೆಗಳನ್ನೂ ಕೈಕೊಳ್ಳಬೇಕಾಗಿರಲಿಲ್ಲ.

ಮುಂದಿನ ಪಾಠದಲ್ಲಿ ಆರಾಧನೆಯಲ್ಲಿ ಯೇಸುವು ಏನು ಬಯಸುತ್ತಾನೆ ಎಂಬುದನ್ನು ನಾವು ಅಧ್ಯಯನ ಮಾಡುತ್ತೇವೆ.

[ಕಲಿಯುವವನೊಂದಿಗೆ ಇನ್ನೊಂದು ಅಧ್ಯಯನ ಸಮಯ ಏರ್ಪಡಿಸಿರಿ.]

© 2009 Truth for Today